ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರ ಸೂಚನೆಯನ್ನು ನಾನು ಗಮನದಲ್ಲಿಟ್ಟು ಕೊಳ್ಳುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಮಹದೇಶ್ವರ ಬೆಟ್ಟದಲ್ಲಿ ವಸತಿ ಗೃಹಗಳು ಇವೆ. ತಿರುಪತಿಯಲ್ಲಿ ಆದಂತೆ ಕಮರ್ಷಿಯಲ್ ಆದರೆ ಆದರ ಪಾವಿತ್ರ್ಯತೆ ಹೋಗುತ್ತೆ. ಇರತಕ್ಕ ವಸತಿ ಗೃಹಗಳನ್ನು ಉತ್ತಮ ಮಟ್ಟದಲ್ಲಿ ನೋಡಿಕೊಂಡು, ದೇವಸ್ಥಾನದ ಪಾವಿತ್ರ್ಯತೆಯನ್ನು ನೋಡಿ ಕೊಳ್ಳತಕ್ಕ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳುತ್ತದೆಯೆ?

ಶ್ರೀ ಎ. ಲಕ್ಷ್ಮೀಸಾಗರ್.—ಗಮನದಲ್ಲಿಟ್ಟುಕೊಳ್ಳುತ್ತೇನೆ.

ಶ್ರೀಮತಿ ಮುಕ್ತಾರುನ್ನಿಸಾ.—ಮಾನ್ಯ ಅಧ್ಯಕ್ಷರೇ, ನಾನು ಒಂದೇ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೇ, ಕಾರ್ಮಿಕ ಮಂತ್ರಿಗಳು ಇರಬೇಕಾಗಿತ್ತು.

ಅಧ್ಯಕ್ಷರು.—ತಾವು ಕೂತುಕೊಳ್ಳಿ. ಮಾನ್ಯ ಸದಸ್ಯರನ್ನು ಕರೆದಿದ್ದೇನೆ.

(ಗೊಂದಲ)

ಶ್ರೀ ಎನ್. ಎಂ. ಆಡ್ಯಾಂತಾಯ.—ಸ್ವಾಮಿ, ಮೂರು ಸಲ ಪ್ರಶ್ನೆ ಮುಂದಕ್ಕೆ ಹಾಕಿ ಇಪತ್ತು ಬಂದಿದೆ. ಈ ರೀತಿ ಉತ್ತರ ಕೊಟ್ಟರೆ ಹೇಗೆ?

ಅಧ್ಯಕ್ಷರು.—ನಾನು ಬೇಗಂರವರನ್ನು ಕರೆದಿದ್ದೇನೆ, ತಾವು ಕೂತುಕೊಳ್ಳಿ. ತಮಗೂ ಅವಕಾಶ ಕೊಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ನಮ್ಮ ರಕ್ಷಣೆಗೆ ಬರಬೇಕು. ಕಾರ್ಮಿಕ ಮಂತ್ರಿಗಳಿಗೆ ಸಂಬಂಧಪಟ್ಟಂತೆ ಪ್ರಶ್ನೆ ಕೇಳಲಾಗಿದೆ. ಇದು ಬಹಳ ಗಹನವಾದ ವಿಚಾರ. ಸದನದಲ್ಲಿ ಕಾರ್ಮಿಕ ಮಂತ್ರಿಗಳು ಇರಬೇಕಾಗಿತ್ತು.

ಅಧ್ಯಕ್ಷರು.—ತುರ್ತು ಕೆಲಸಕ್ಕಾಗಿ ಹೋಗಿದ್ದೇನೆಂದು, ನನಗೆ ಪತ್ರ ಬರೆದಿದ್ದಾರೆ. ಅವರ ಪರವಾಗಿ ಮಾನ್ಯ ಲಕ್ಷ್ಮೀಸಾಗರ್‌ರವರು ಉತ್ತರ ಕೊಡುತ್ತಿದ್ದಾರೆ. ನಿಮಗೆ ಉತ್ತರ ಬೇಕೋ, ಮಂತ್ರಿಗಳು ಬೇಕೋ?

(ಗೊಂದಲ)

ಅಧ್ಯಕ್ಷರು.—ಮಾನ್ಯ ಸದಸ್ಯರ ಪ್ರಶ್ನೆಯನ್ನು ತಡೆಹಿಡಿದಿದ್ದೇನೆ. ಸರಿಯಾದ ಉತ್ತರವನ್ನು ತರಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಹರಿಜನ ಗಿರಿಜನ ಪಂಗಡಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯ ಸೌಲಭ್ಯ ಕಂರಿತು

೪ (೯೦೫) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ರಾಜ್ಯವಲ್ಲೆರುವ ಹರಿಜನ ಗಿರಿಜನ ಹಾಗೂ ಹಿಂದುಳಿದ ವರ್ಗದ ವಿದ್ಯಾರ್ಥಿನಿಲಯಗಳೆಷ್ಟು?

ಆ) ಸದರಿ ವಿದ್ಯಾರ್ಥಿನಿಲಯಗಳಲ್ಲಿ ಆನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮುಂದುವರಿಸಿಕೊಂಡು ಹೋಗುವ ಪದ್ಧತಿ ಮೂಲಕ ಶಿಕ್ಷಣ ಮುಂದುವರೆಸಲು ಅವಕಾಶವಿದ್ದರೂ ವಿದ್ಯಾರ್ಥಿನಿಲಯಗಳಲ್ಲಿ ವಸತಿ ಹಾಗೂ ಸೌಲಭ್ಯ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಸದರಿ ಬಡ ವಿದ್ಯಾರ್ಥಿಗಳಿಗೆ ಈ ತೊಂದರೆಯನ್ನು ಹೋಗಲಾಡಿಸಿ ವಿದ್ಯಾರ್ಥಿನಿಲಯಗಳಲ್ಲಿ ವಸತಿ ಸೌಲಭ್ಯ ಕಲ್ಪಿಸಿಕೊಳ್ಳಲು ಕ್ರಮ ಕೈಗೊಳ್ಳುವರೇ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ೧೪೭.

ಆ) ಬಂದಿದೆ.

೫) ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮರು ಪ್ರವೇಶಕ್ಕೆ ಅವಕಾಶವಿದೆ. ಆದರೆ ಮೆಟ್ರಿಕ್ ನಂತರದಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ೧೯೮೬-೮೭ನೇ ಸಾಲಿಗೆ ಮಾತ್ರ ಮರು ಪ್ರವೇಶಕ್ಕೆ ಅವಕಾಶ ಮಾಡಿಕೊಡಲಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಈಗ ೨೫೦ ಪೋಸ್ಟ್ ಮೆಟ್ರಿಕ್ ಖಾಸಗಿ ವಿದ್ಯಾರ್ಥಿನಿಲಯಗಳು ಇವೆ. ಪ್ರೀ ಮೆಟ್ರಿಕ್‌ನಲ್ಲಿ ೧೧ ಸಾವಿರ ಜನ ಖಾಸಗಿ ವಿದ್ಯಾರ್ಥಿನಿಲಯಗಳಲ್ಲಿ ಇದ್ದಾರೆ. ಸಮಾಜಘಾತುಕರು, ಸಮಾಜ ಸೇವಕರೆಂದು ಹೇಳಿಕೊಂಡು ಖಾಸಗಿ ವಿದ್ಯಾರ್ಥಿನಿಲಯಗಳಲ್ಲಿ ೫೦ ಜನ ವಿದ್ಯಾರ್ಥಿಗಳಿದ್ದರೆ, ೧೦೦ ಜನ ವಿದ್ಯಾರ್ಥಿಗಳಿದ್ದಾರೆಂದು ಹೇಳುವುದಾದ್ದರೆ ಮಾನ್ಯ ಮಂತ್ರಿಗಳಿಗೂ ಸಹ ಗೊತ್ತಿದೆ. ಅದನ್ನು ತಪ್ಪಿಸಿ ಸರ್ಕಾರ ಆಯಗಳನ್ನು ತೆಗೆದುಕೊಳ್ಳುವ ಯೋಜನೆ ಇಡೆಯೇ ? ಇನ್ನು ನನ್ನ (೫) ಪ್ರಶ್ನೆಗೆ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮರು ಪ್ರವೇಶಕ್ಕೆ ಅವಕಾಶವಿದೆ. ಆದರೆ ಮೆಟ್ರಿಕ್ ನಂತರದಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ೧೯೮೬-೮೭ನೇ ಸಾಲಿಗೆ ಮಾತ್ರ ಮರು ಪ್ರವೇಶಕ್ಕೆ ಅವಕಾಶ ಮಾಡಿಕೊಡಲಾಗಿದೆ ಎಂದು ಹೇಳಿದ್ದಾರೆ. ಈ ಬಗ್ಗೆ ಕರ್ನಾಟಕ ರಾಜ್ಯದಾದ್ಯಂತ ಒಂದು ದೊಡ್ಡ ಚಳುವಳಿ ನಡೆದಿದೆ. ದಲಿತರು ಒಂದು ದೊಡ್ಡ ಹೋರಾಟವನ್ನೇ ಮಾಡಿದ್ದಾರೆ. ೧೯೮೬-೮೭ರ ನಂತರವೂಸಹ ವಿದ್ಯಾಭ್ಯಾಸದಲ್ಲಿ ಒಂದು ಅಥವಾ ಎರಡು ವಿಷಯಗಳಲ್ಲಿ ವಿದ್ಯಾರ್ಥಿಗಳು ಅನುತ್ತೀರ್ಣರಾದರೆ ಅವರು ತಮ್ಮ ವಿದ್ಯಾಭ್ಯಾಸ ಮುಂದುವರಿಸಿಕೊಂಡು ಹೋಗಲು ಅವಕಾಶ ಇದೆ. ಅದೇ ರೀತಿ ವಿದ್ಯಾರ್ಥಿನಿಲಯಗಳಲ್ಲೂ ಮಾಡಿಕೊಡಬೇಕೆಂದು ಹೇಳಿದ್ದೇವೆ. ೧೯೮೬-೮೭ರ ನಂತರವೂ ಅದನ್ನು ಮುಂದುವರಿಸಿಕೊಂಡು ಹೋಗಬೇಕು. ರಿಸರ್ವೇಷನ್ ೧೦ ವರ್ಷಕ್ಕೆ ಮುಗಿಯಬೇಕಾಗಿತ್ತು, ಆದರೆ ಹರಿಜನರ ಉದ್ಧಾರ ಆಗಿಲ್ಲ ಎಂದು ಮುಂದುವರಿಸಿಕೊಂಡು ಹೋಗಿದ್ದಾರೆ. ಅದೇ ರೀತಿ ಇಲ್ಲಿಯೂ ಸಹ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ವಿದ್ಯಾರ್ಥಿನಿಲಯಗಳಲ್ಲಿ ಅವರು ಮುಂದುವರಿಯಲಿಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಸದಸ್ಯರು ಹೇಳಿದ ಹಾಗೆ ಖಾಸಗಿ ವಿದ್ಯಾರ್ಥಿನಿಲಯಗಳನ್ನು ಸರ್ಕಾರ ವಹಿಸಿಕೊಳ್ಳುತಕ್ಕ ಪ್ರಶ್ನೆ ಇಲ್ಲ. ಏಕೆಂದರೆ, ಈ ವಿದ್ಯಾಭ್ಯಾಸ ಮತ್ತು ಇನ್ನಿತರ ನಾಗರೀಕ ಸೌಲಭ್ಯಗಳನ್ನು ಒದಗಿಸತಕ್ಕ ಕೆಲಸ ಬಹಳ ದೊಡ್ಡ ಕೆಲಸ. ಸರ್ಕಾರ ಅದನ್ನು ಒಂದೇ ಮಾಡಲಿಕ್ಕೆ ಆಗುವುದಿಲ್ಲ. ಸ್ವಯಂಸೇವಾ ಸಂಸ್ಥೆಗಳನ್ನು ಬೆಳೆಸಬೇಕಾಗುತ್ತದೆ. ವಿದ್ಯಾರ್ಥಿನಿಲಯವವರು ಕೊಡತಕ್ಕ ಸಂಖ್ಯೆಯ ಬಗ್ಗೆ ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅವರ ಬಗ್ಗೆ ನಾನು ಕ್ರಮ ತೆಗೆದು ಕೊಂಡಿದ್ದೇನೆ. ಇನ್ನೂ ಸಹ ತೀವ್ರತರವಾದ ಇನ್ಸ್‌ಪೆಕ್ಷನ್ ಮಾಡಿ ಅವೆಲ್ಲವು ಸರಿಪಡಿಸಲಿಕ್ಕೆ ಸರ್ಕಾರ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತದೆ. ಎರಡನೆಯದಾಗಿ ಹೇಳಬೇಕೆಂದರೆ ಕಾಲಾಕಾಲೇಜುಗಳಲ್ಲಿ ಅನುತ್ತೀರ್ಣರಾದಂಥ ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡಬೇಕೆಂದು ಹೇಳಿದ್ದಾರೆ ಮೆಟ್ರಿಕ್ ಪೂರ್ವದಲ್ಲಿ ಅವಕಾಶ ಇದೆ. ಅದು ಕಾಲೇಜಿನವರಿಗೆ ಇರಲಿಲ್ಲ. ೧೯೮೬-೮೭ರಲ್ಲಿ ಒಂದು ಒತ್ತಡ ಬಂದದ್ದರಿಂದ ವಿಶೇಷ ಎಂದು ಪರಿಗಣಿಸಿ ರೂಲ್ಸ್, ರಿಲ್ಯಾಕ್ಸ್ ಮಾಡಿ ಪ್ರವೇಶಕ್ಕೆ ಅನುಕೂಲ ಮಾಡಿ ಕೊಟ್ಟಿದ್ದೆವು. ಮತ್ತೆ ಈ ವರ್ಷ ಕಂಟಿನ್ಯೂ ಮಾಡಬೇಕೆಂದು ಹೇಳಿದ್ದೀರಿ. ಆದರ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ವರ್ಷ ವರ್ಷ ಇದನ್ನು ಮಾಡತಕ್ಕದ್ದು ಇದೆ. ಪ್ರತಿ ವರ್ಷವೂ ವಿದ್ಯಾರ್ಥಿನಿಲಯ ಪ್ರಾರಂಭವಾದಾಗ ಒಂದು ದೊಡ್ಡ ಹೋರಾಟ ಮಾಡಿದ ಮೇಲೆ ಅವಕಾಶ ಮಾಡುತ್ತಾರೆ.ಅಂಥಾದ್ದು ಬೇಡ ಎಂದು ಹೇಳುತ್ತಿದ್ದೇನೆ. ಪ್ರತಿ ವರ್ಷವೂ ಕಾಲೇಜು ಪ್ರಾರಂಭ ವಾಯಿತು ಅಂದರೆ ಹೋರಾಟ ಪ್ರಾರಂಭವಾಗುತ್ತದೆ ಅದು ತಪ್ಪಬೇಕು. ಅದರ ಬಗ್ಗೆ ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಡಬೇಕು. ಕ್ಯಾರಿ ಓವರ್ ಸಿಸ್ಟಮ್ ಎಜುಕೇಷನ್ ಸಿಸ್ಟಮ್‌ನಲ್ಲಿ ಏನಿದೆ ಅದೇ ರೀತಿ ಕಾಲೇಜು ಹಾಸ್ಟಲುಗಳಲ್ಲೂ ಸಹ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಅದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಶ್ರೀ ಯು. ಭೂಪತಿ.—ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿನಿಲಯಗಳಿಗೆ ಮರು ಪ್ರವೇಶಕ್ಕೆ ಅವಕಾಶ ಇದೆ ಎಂದು ಹೇಳಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಅನುತ್ತೀರ್ಣರಾದಂಥ ಪರಿಶಿಷ್ಟಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯದಲ್ಲಿ ಅವಕಾಶ ಮಾಡಿಕೊಟ್ಟಿಲ್ಲ, ಅದಕ್ಕೆ ಬೇಕಾದಷ್ಟು ರೆಕಾರ್ಡ್ಸ್ ಇವೆ. ಇದರ ಬಗ್ಗೆ ಮಾನ್ಯ ಮಂತ್ರಿ ಮರು ಪ್ರವೇಶ ಎಷ್ಟು ಜನರಿಗೆ ಸಿಕ್ಕಿದೆ, ಎಷ್ಟು ಜನರಿಗೆ ಸಿಕ್ಕಿಲ್ಲ ಎಂದು

ನೋಡಿಕೊಂಡು ಉತ್ತರ ಕೊಡುವುದು ಒಳ್ಳೆಯದು. ಇದುವರೆಗೂ ಎಲ್ಲಿಯೂ ಕೂಡ ಅವರಿಗೆ ಪ್ರವೇಶ ಕೊಟ್ಟಿಲ್ಲ. ಆ ರೀತಿ ಕೊಟ್ಟಿದ್ದರೆ, ಇಂತಿಂಥ ಕಡೆಗಳಲ್ಲಿ ಕೊಟ್ಟಿದ್ದೇವೆಂದು ಹೇಳಲಿ.

ಶ್ರೀ ಜಿ. ಬಸವಣ್ಣಪ್ಪ.—ಶಾಲಾಕಾಲೇಜುಗಳ ಸಂಖ್ಯೆ ಜಾಸ್ತಿಯಾಗಿದೆ ಅದೇ ರೀತಿ ವಿದ್ಯಾರ್ಥಿ ನಿಲಯಗಳ ಸಂಖ್ಯೆಯೂ ಸಹ ಜಾಸ್ತಿಯಾಗಿದೆ. ನಾವು ಒಂದು ತತ್ವದ ಆಧಾರದ ಮೇಲೆ ಹೋಗುವಾಗ ಅನುತ್ತೀರ್ಣರಾದಂಥ ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡುವುದಾದರೆ ಹೊಸದಾಗಿ ಸೇರತಕ್ಕವರಿಗೆ ಬಹಳ ಕಷ್ಟವಾಗುತ್ತದೆ. ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮರು ಪ್ರವೇಶಕ್ಕೆ ಅವಕಾಶವಿದೆ. ಆದರೆ ತತ್ವ ನಿಷ್ಠೆಯಿಂದ ಆದಷ್ಟೂ ಹೊಸದಾಗಿ ಬಂದಿರತಕ್ಕವರಿಗೆ ಕೊಡತಕ್ಕ ವ್ಯವಸ್ಥೆ ಇದೆ. ಫೆಲಾದವರಲ್ಲಿ ಅತೀ ಬಡಕುಟುಂಬದಿಂದ ಬಂದಂತವರಿಗೆ ಅವಕಾಶ ಇದೆ. ಈ ನೀತಿಯನ್ನು ನಾವು ಅನುಸರಿಸುತ್ತಿದ್ದೇವೆ. ಆದರೆ ಮೆಟ್ರಿಕ್ ನಂತರ ಫೇಲಾದ ಹುಡುಗರಿಗೆ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಕ್ಕೆ ಅವಕಾಶ ಇರಲಿಲ್ಲ. ಇದಕ್ಕಾಗಿ ಇದ್ದ ರೂಲ್ಸನ್ನು ಕಳೆದವರ್ಷ ಮಾತ್ರ ರಿಲ್ಯಾಕ್ಸ್ ಮಾಡಿದ್ದೆವು. ಆದರೆ ಮಾನ್ಯ ವೆಂಕಟರಾಮಯ್ಯನವರು ಈಗ ಈ ರೂಲನ್ನೇ ತೆಗೆದು ಹಾಕಬೇಕೆಂದು ಕೇಳಿದ್ದಾರೆ. ಇದನ್ನು ಪರಿಶೀಲನೆ ಮಾಡುತ್ತೇವೆ.

ತಾಲ್ಲೂಕು ಮಾರುಕಟ್ಟೆ ಸಂಘಗಳ ಬಗ್ಗೆ

೫೫ (೧೦೩) ಶ್ರೀ ಕೆ. ಹೆಚ್. ಪಾಟೀಲ್ (ಗದಗ್).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ :—

ತಾಲ್ಲೂಕು ಮಾರುಕಟ್ಟೆ ಸಂಘಗಳಾಗಿರಲು ಯಾವ ಯಾವ ಗುಣಗಳನ್ನು ಹೊಂದಿರಬೇಕು ಹಾಗೂ ಕಳೆದ ೭೦ ವರ್ಷಗಳಿಂದಲೂ ತಾಲ್ಲೂಕು ಮಾರುಕಟ್ಟೆ ಸಂಘಗಳಾಗಿ ಕೆಲಸ ಮಾಡುತ್ತಾ ಬಂದಿರುವ ಸಂಘಗಳು ಈಗ ಒಮ್ಮೆಲೆ ಬದಲಾಗಿದೆಯೆಂದು ಸಾರಲು ಕಾರಣಗಳೇನು ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಈ ಕೆಳಗೆ ಕಾಣಿಸಿದ ಗುಣಗಳನ್ನು ಹೊಂದಿದ ಮಾರುಕಟ್ಟೆ ಸಹಕಾರ ಸಂಘಗಳನ್ನು ತಾಲ್ಲೂಕು ವ್ಯವಸಾಯೋತ್ಪನ್ನ ಸಹಕಾರ ಮಾರಾಟ ಸಂಘಗಳೆಂದು ಪರಿಗಣಿಸಲಾಗುವುದು:—

೧. ಸಂಘದ ಕಾರ್ಯಕ್ಷೇತ್ರ ಆಯಾ ತಾಲ್ಲೂಕಿಗೆ ಪರಿಮಿತವಾಗಿರಬೇಕು.

೨. ಸಂಘವು ಮುಖ್ಯವಾಗಿ ರೈತ ಸದಸ್ಯರ ವ್ಯವಸಾಯೋತ್ಪನ್ನಗಳನ್ನು ಮಾರಾಟ ಮಾಡುವ ಉದ್ದೇಶ ಹೊಂದಿರಬೇಕು.

೩. ತನಗೆ ಸಮಾವೇಶಗೊಂಡ ಪ್ರಾಥಮಿಕ ಕೃಷಿ ಸಾಲ ಸಂಘಗಳ ಮುಖಾಂತರ ರಾಸಾಯನಿಕ ಗೊಬ್ಬರ, ಬಿತ್ತನೆ ಬೀಜಗಳು ಮತ್ತು ಕೃಷಿ ಉತ್ಪಾದನೆಗೆ ಬೇಕಾದ ಇತರೇ ಎಲ್ಲಾ ಸಲಕರಣೆಗಳನ್ನು ಪೂರೈಸುವ ವ್ಯವಹಾರದಲ್ಲಿ ತೊಡಗಿರಬೇಕು.

೪. ಪತ್ತು ಹಾಗೂ ಮಾರಾಟ ಜೋಡಣೆಯು ಕಾರ್ಯ ಕ್ರಮದ ಅಂಗವಾಗಿ ಕೃಷಿ ಉತ್ಪಾದನೆಗೆಂದು ನೀಡಿದ ಬೆಳೆ ಸಾಲವನ್ನು ಪ್ರಾಥಮಿಕ ಕೃಷಿಸಾಲ ಸಂಘಗಳ ಪರವಾಗಿ ವಸೂಲು ಮಾಡುವ ಕಾರ್ಯದಲ್ಲಿ ತೊಡಗಿರಬೇಕು.

೫. ಸದಸ್ಯರ ಕೃಷಿ ಉತ್ಪತ್ತಿ ಆಧಾರದ ಮೇಲೆ ಅದವು ಸಾಲಗಳನ್ನು ಮಂಜೂರು ಮಾಡುವ ಕಾರ್ಯದಲ್ಲಿ ಕೈಗೊಂಡಿರಬೇಕು, ಮತ್ತು

೬. ತನಗೆ ಸಮಾವೇಶವಾದ ಪ್ರಾಥಮಿಕ ಕೃಷಿಸಾಲ ಸಂಘಗಳ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮ ಪಡುತ್ತಿರಬೇಕು.

ಮೇಲಿನ ಧ್ಯೇಯೋದ್ದೇಶಗಳಿಗೆ ಮತ್ತು ಕಾರ್ಯ ಚಟುವಟಿಕೆಗಳಿಗೆ ಪೂರಕವಾಗಿ ಕೃಷಿ ಉತ್ಪತ್ತಿಯ ಪರಿಷ್ಕರಣ ಮೊದಲಾದ ಚಟುವಟಿಕೆಗಳನ್ನು ಈ ಸಂಘಗಳು ಕೈಗೊಳ್ಳಬಹುದು.

ಸನ್ ೧೯೬೪ರಲ್ಲಿ ರಚಿತವಾಗಿದ್ದ ದಾಂತ್ವಾಲ ಕಮಿಟಿಯ ತಿಫಾರಸ್ಸಿಗೆ ಅನುಗುಣವಾಗಿ, ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಗಳು ಅಸ್ತಿತ್ವಕ್ಕೆ ಬಂದಿವೆ. ಆದರೆ ಹತ್ತಿ, ಅಡಿಕೆ, ಕಾಫಿ, ಯಾಲಕ್ಕಿ ಮೊದಲಾದ ವಿಶಿಷ್ಟವಾದ ಸರಕು ಮಾರಾಟ ಸಹಕಾರ ಸಂಘಗಳು ನಮ್ಮ ರಾಜ್ಯದಲ್ಲಿ ಕಳೆದ ೭೦ ವರ್ಷಗಳಿಂದಲೂ ಕಾರ್ಯವಹಿಸುತ್ತಿರುವುದು ನಿಜವಾದ ಸಂಗತಿ.